Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986




**Rtn. Francesco Arezzo**
RI President



**Rtn. Palaksha K.**
Dist. Governor



**Rtn. PHF. I. Narayana**
Asst. Governor



**Rtn. Koushik Yadiyal**
Zonal Lieutenant



40h year of Service and Fellowship


Volume 40 | Issue - 1 | 10th July 2025


## Special Bulletin

on the occasion of installation ceremony of new office bearers 2025-26

Installation Officer
**PDG. Rtn. Abhinandan A. Shetty**
Regional Public Image Coordinator, Zone 7

Chief Guest :
**Prof. Dr. Niranjan A. Rao, MD (Ayu)**
Vice Principal,
S.D.M. College of Ayurveda, Hospital & Research Center, Udupi

Date : 10-07-2025, Thursday | Time : 6.45 p.m.
Venue : Kumbashi Radhabhai Venkatramana Prabhu Ranga Mandhira, Bhandarkars' College Campus, Kundapura.



**Rtn. Sachin Nackathaya**
President



**Rtn. Gerald Crasto**
Secretary



**Rtn. Ramananda Karanth**
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನೆಲ್ಲಾ ರೋಟರಿ ಬಂಧುಗಳಿಗೆ ನನ್ನ ನಮಸ್ಕಾರಗಳು.

ಮತ್ತೊಮ್ಮೆ ಅಂದರೆ 4ನೇ ಬಾರಿ ನಮ್ಮ ರೋಟರಿ ಕುಂದಾಪುರ ದಕ್ಷಿಣದ ಜಾಸ್ಮಿನ್ ಸಂಪಾದಕನಾಗಿ ನನ್ನನ್ನು ನಿಯುಕ್ತಿಗೊಳಿಸಿದಕ್ಕಾಗಿ ಹೃದಯಾಂತರಾಳದ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ. ತಮ್ಮೆಲ್ಲರ ಸಹಕಾರ ಪ್ರೋತ್ಸಾಹ ತಡೆಯಿಲ್ಲದಂತೆ ಜಾಸ್ಮಿನ್ ಮುನ್ನಡೆಸಲು ನನಗೆ ಸಿಗುತ್ತದೆ ಎಂಬ ಭರವಸೆಯೊಂದಿಗೆ 2024–25 ರ ಸಾಲಿನಲ್ಲಿ ಅತ್ಯಮೋಘವಾಗಿ ಒಂದು ವರುಷ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಕಾರ್ಯ ಚಟುವಟಿಕೆಗಳನ್ನು ನಡೆಸಿ ಇಂದು ತಮ್ಮ ಪದವಿಯನ್ನು ಹಸ್ತಾಂತರಿಸುತ್ತಿರುವ ಅಧ್ಯಕ್ಷ ರೊ. ಜುಡಿತ್ ಮೆಂಡೋನ್ಸಾ ಹಾಗೂ ಕಾರ್ಯದರ್ಶಿ ರೊ. ಭರತ್ ಶೆಟ್ಟಿ ತಂಡಕ್ಕೆ ಜಾಸ್ಮಿನ್ ಬಳಗದಿಂದ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. 2025–26 ರ ಸಾಲಿಗೆ ಅಧ್ಯಕ್ಷರಾಗಿ ರೊ. ಸಚಿನ್ ನಕ್ಕತ್ತಾಯ ಹಾಗೂ ರೊ. ಜೆರಾಲ್ಡ್ ಕ್ರಾಸ್ತಾ ತಂಡಕ್ಕೆ ಮುಂದಿನ ಒಂದುವರುಷ ನಿರ್ವಿಘ್ನವಾಗಿ ಯಶಸ್ವಿಯಾಗಿ ಮುನ್ನಡೆಸಿ ಎಂದು ಶುಭ ಹಾರೈಸುತ್ತಿದ್ದೇವೆ.

**– ರೊ. ರಮಾನಂದ ಕಾರಂತ್**

---

## Incomming President's message :



Dear Rotarians,

As I step into the role of President for our vibrant Rotary Club Kundapura South. I am filled with gratitude and excitement for the journey ahead. This year, our district is focusing on impactful projects in health, education, road safety, and the environment. These initiatives are not just club goals—they are opportunities for us to create lasting change in our community.

To achieve these ambitious targets, I earnestly request the support and active participation of every member. Your unique skills and dedication are the backbone of our club's success.

Let me share a short story that highlights the power of teamwork:

Once, a group of villagers faced a severe drought. Each tried to dig a well alone, but none reached water. Realizing their struggle, they decided to work together on a single well. With everyone contributing their effort, they finally struck water—enough for the whole village. Their unity turned individual failures into a shared victory.

Just like the villagers, our combined efforts can accomplish what none of us could achieve alone. Let us come together, support each other, and make a real difference in the lives we touch.

Looking forward to a year of service, fellowship, and meaningful impact!

Yours in Rotary,

**Rtn. K. Sachin Nackathaya**

## Know your President

Mr. Sachin Nackathaya was born on 13th May 1980 to Smt. Sujatha & Sri Seetharam Nackathaya. He did his early schooling in Little Rock Indian School, Brahmavar. He completed his bachelor's in Buisness Management from Poorna Prajna College Udupi. He obtained his master's in Buisness Administration from Manipal University. Currently he is managing his family buisness M/s Mangalore Tiles Ltd ( Omtiles). He joined Rotaract movement in the year 1996. He has taken up several post in Rotaract Movement. When he was the president of Rotaract club Kundapur South, club won many laurels to its credit. He has also served as District Rotaract Representative of Rotaract R.I Dist 3180. Besides this he is also the President of Kundeshwara Yuvajana sabha & Ganeshotsava samiti . He joined Rotary Club Kundapur South in the year 2015. He is also an active member of Bni Vajra Udupi Chapter. District small Industries Association, Udupi and Udupi Chamber of Commerce. In his personal life, Mr. Sachin enjoys cycling, traveling, off-roading, listening to music, and swimming. He is married to Ann.Megha Rao who has completed M.Sc. in Yoga Therapy. She is currently working as Yoga Therapist.

---

## ಕಾರ್ಯದರ್ಶಿ ಜೆರಾಲ್ಡ್ ಕ್ರಾಸ್ತ ಇವರ ಪರಿಚಯ



ದಿವಂಗತ ರಾಬರ್ಟ್ ಕ್ರಾಸ್ತಾ ಹಾಗೂ ದಿವಂಗತ ಆಲೀಸ್ ಕ್ರಾಸ್ತಾ ಇವರ ಮಗನಾಗಿ 1966 ರಲ್ಲಿ ಕನ್ನಡ ಕುದುರಿನಲ್ಲಿ ಶ್ರೀಯುತರ ಜನ್ಮವಾಗಿರುತ್ತದೆ. ಶ್ರೀಯುತರು ತಮ್ಮ ಪ್ರಾಥಮಿಕ ಹಾಗೂ ಹೈಸ್ಕೂಲು ವಿದ್ಯಾಭ್ಯಾಸವನ್ನು ಕನ್ನಡಕುದ್ರು ಹಾಗೂ ಗಂಗೊಳ್ಳಿಯಲ್ಲಿ ಪೂರೈಸಿದ ಇವರು ಡಿಪ್ಲೋಮಾ ಇನ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಿಟ್ಟೆಯಲ್ಲಿರುವ ಕೆ. ಎಸ್. ಹೆಗಡೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪೂರೈಸಿರುತ್ತಾರೆ. ತಮ್ಮ ವಿದ್ಯಾಭ್ಯಾಸದ ನಂತರ ಎರಡು ವರುಷ ಮಸ್ಕತ್‌ನಲ್ಲಿ ಕೆಲಸ ಮಾಡಿದ ಅನುಭವಗಳೊಂದಿಗೆ ತನ್ನ ಹುಟ್ಟೂರಿಗೆ ಆಗಮಿಸಿ ರಾಜಕೀಯ ರಂಗವನ್ನು ಪ್ರವೇಶಿಸಿ ಹೆಮ್ಮಾಡಿ ಗ್ರಾಮ ಪಂಚಾಯತ್‌ನ ಸದಸ್ಯರಾಗಿ 15 ವರ್ಷಗಳ ಕಾಲ ತಮ್ಮನ್ನು ತಾವು ಸಮಾಜ ಸೇವೆಗೆ ಅರ್ಪಿಸಿಕೊಂಡಿರುತ್ತಾರೆ. ಇದೇ ರೀತಿ ಗಂಗೊಳ್ಳಿ ಇಗರ್ಜಿಯ ಅಧ್ಯಕ್ಷನಾಗಿ ಎರಡು ವರುಷ ಸೇವೆ ಸಲ್ಲಿಸಿ ಹಾಗೂ ಉಪಾಧ್ಯಕ್ಷನಾಗಿ 15 ವರ್ಷಗಳ ಕಾಲ ತಮ್ಮ ಸೇವೆಯನ್ನು ಸಮಾಜಕ್ಕೆ ನೀಡಿರುತ್ತಾರೆ. ಹೆಮ್ಮಾಡಿಯ ರೋಟರಿ ಗ್ರಾಮೀಣದಳದ ಅಧ್ಯಕ್ಷನಾಗಿ ಎರಡು ವರ್ಷ ಸೇವೆಯನ್ನು ಸಲ್ಲಿಸಿರುತ್ತಾರೆ. ಉಡುಪಿ ಜಿಲ್ಲೆಯ ಪ್ರತಿಷ್ಠಿತ ರೋಸರಿ ಕ್ರೆಡಿಟ್ ಕೊ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕನಾಗಿ 5 ವರುಷ ಸೇವೆ ಸಲ್ಲಿಸಿರುತ್ತಾರೆ. ಇದಲ್ಲದೆ ಹತ್ತು ಹಲವಾರು ಸಂಘಟನೆಗಳಲ್ಲಿ ಸಕ್ರಿಯ ಸದಸ್ಯನಾಗಿ ಸೇವೆಯನ್ನು ಸಲ್ಲಿಸಿರುವ ಅನುಭವ ಇವರದ್ದಾಗಿದೆ. ಶ್ರೀಯುತರು 2016 ರಂದು ರೋಟರಿ ಕುಂದಾಪುರ ದಕ್ಷಿಣದ ಸದಸ್ಯರಾಗಿ ರೋಟರಿಯ ಎಲ್ಲಾ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು 2025–26 ರ ಪ್ರಸಕ್ತ ವರ್ಷದ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ. ಶ್ರೀಯುತರು ಪತ್ನಿ ಜ್ಯೋತಿ ಕ್ರಾಸ್ತಾ ಇವರನ್ನು ವಿವಾಹವಾಗಿ ಇಬ್ಬರು ಹೆಣ್ಣು ಮಕ್ಕಳು ಜುವೆಲ್ ಕ್ರಾಸ್ತಾ ಮತ್ತು ಜೆಸ್ಸಿಲ್ ಕ್ರಾಸ್ತಾ ಹಾಗೂ ಮಗ ಜೋವಿಯಲ್ ಕ್ರಾಸ್ತಾರೊಂದಿಗೆ ಸುಂದರ ಬದುಕನ್ನು ನಡೆಸುತ್ತಿರುವ ಇವರು ಪ್ರಸ್ತುತ ಸಿಗಡಿ ಕೃಷಿ ಹಾಗೂ ಕೇಟರಿಂಗ್ ಉದ್ಯಮವನ್ನು ನಡೆಸುತ್ತಾ ಕುಂದಾಪುರದಲ್ಲಿ ನೆಲೆಸಿರುತ್ತಾರೆ.

# Rtn. Francesco Arezzo - President 2025-26



Francesco Arezzo is an orthodontist in private practice and owns an agricultural enterprise that produces extra virgin olive oil in Sicily.

Arezzo is a graduate of the University of Padua and a member of the Italian, European, and American orthodontics associations, as well as the Italian and European lingual orthodontics associations. He is a dentistry graduate of the University of Cagliari, where he also received a master's in lingual orthodontics.

He has served as vice president of the National Association of Italian Dentists for the province of Ragusa and was the founder and head for seven years of the Ragusa delegation to the National Trust for Italy.

Arezzo is also the owner of an agricultural enterprise and producer of extra virgin olive oil in the Monti Iblei region of Sicily. He has been vice president of the administrative council of the consortium controlling and regulating quality production of oil in that region. He owns two boutique hotel settlements there. He enjoys modern art and opera.

A Rotary member for 36 years, Arezzo has served as vice chair of the Joint Strategic Planning Committee and as RI director, chair of the 2023 Melbourne Convention Committee, learning facilitator, and district conference presidential representative, among other roles.

He is married to Anna Maria Arezzo-Criscione, an entrepreneur in the tourism field. They have two daughters and two grandchildren. His daughter Raffaela spent a year in Florida as part of a Rotary Youth Exchange. Francesco and Anna Maria are Benefactors and Major Donors to The Rotary Foundation.

---

# ಜಿಲ್ಲಾ ಗವರ್ನರ್ ಸಂದೇಶ



ಪ್ರತಿಷ್ಠಿತ ಅಂತರಾಷ್ಟ್ರೀಯ ರೋಟರಿ ಜಿಲ್ಲೆ 3182ರ 2025–2026 ನೇ ಸಾಲಿನ ಜಿಲ್ಲಾ ಗವರ್ನರ್ ಆಗಿ ಜಿಲ್ಲೆಯ ಮುಂದಾಳತ್ವ ವಹಿಸುವ ಅಪೂರ್ವ ಅವಕಾಶ ಒದಗಿಸಿ ಕೊಟ್ಟ ಜಿಲ್ಲೆಯ ಸಮಸ್ತ ರೋಟರಿ ಬಂಧುಗಳಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ರೋಟರಿ ಹೊಸ ವರ್ಷ 2025–26ರ ಶುಭಾಶಯಗಳು. ಈ ವರ್ಷದ ಅಂತರಾಷ್ಟ್ರೀಯ ಅಧ್ಯಕ್ಷರಾದ ರೋಟೇರಿಯನ್ ಫ್ರಾನ್ಸೆಸ್ಕೊ ಅರೆಝೊ ಅವರು ನೀಡಿರುವ ಧ್ಯೇಯ ವಾಕ್ಯ "ಯುನೈಟ್ ಫಾರ್ ಗುಡ್" ನಾವೆಲ್ಲರೂ ಒಟ್ಟಾಗಿ ಸೇರಿ ರೋಟರಿಯ ಕಾರ್ಯವನ್ನು ಮಾಡೋಣ.

ಪ್ರತಿಯೊಬ್ಬ ರೋಟರಿ ಸದಸ್ಯರು ವಿಶೇಷ ಸಾಮರ್ಥ್ಯ ಹೊಂದಿದ್ದು ರೋಟರಿ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಮೂಲಕ ಜನರಲ್ಲಿ ಭರವಸೆ ಮೂಡಿಸಿ ವಿಶ್ವ ಶಾಂತಿಗಾಗಿ ಶ್ರಮಿಸೋಣ.

ರೋಟರಾಕ್ಟ್ ಕ್ಲಬ್ ಸದಸ್ಯರು ಮತ್ತು ಇಂಟರಾಕ್ಟ್ ಕ್ಲಬ್ ಸದಸ್ಯರು ನಮ್ಮ ಉತ್ತಮ ಪಾಲುದಾರರಾಗಿರುತ್ತಾರೆ. ನಾವೆಲ್ಲ ಒಟ್ಟಾಗಿ ಕೈಜೋಡಿಸಿ ಕಾರ್ಯನಿರ್ವಹಿಸೋಣ. ಈ ಮೂಲಕ ರೋಟರಿ ಗೌರವ ಜನಪ್ರಿಯತೆ ಹೆಚ್ಚಿಸೋಣ. ಅವಕಾಶ ವಂಚಿತರಿಗೆ ಸಹಾಯ ಮಾಡುವ ಮೂಲಕ ಜಗತ್ತಿನಲ್ಲಿ ಅರ್ಥಪೂರ್ಣ ಬದಲಾವಣೆ ತರಲು ಪ್ರಯತ್ನಿಸೋಣ.

ಈ ವರ್ಷದಲ್ಲಿ ನಾಲ್ಕು ಜಿಲ್ಲಾ ಯೋಜನೆಗಳನ್ನು ಸಂಕಲ್ಪಿಸಲಾಗಿದೆ

1 ಆರೋಗ್ಯ     2 ಶಿಕ್ಷಣ     3 ಪರಿಸರ     4 ರಸ್ತೆ ಸುರಕ್ಷತೆ

ಎಲ್ಲಾ ಕ್ಲಬ್ಬುಗಳು ಮೇಲಿನ ತಲೆ ಬರಹಗಳು ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಶಿಕ್ಷಕರ ಸಬಲೀಕರಣ, ವೃತ್ತಿ ಮಾರ್ಗದರ್ಶನ, ಮರಗಳನ್ನು ಬೆಳೆಸುವುದು, ತ್ಯಾಜ್ಯ ವಸ್ತುಗಳ ವೈಜ್ಞಾನಿಕ ನಿರ್ವಹಣೆ, ಕೆರೆಗಳ ಪುನಶ್ಚೇತನ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು ಮತ್ತು ನಿರ್ವಹಿಸುವಿಕೆ, ಕ್ಯಾನ್ಸರ್‌ಗಳ ಬಗ್ಗೆ ಮಾಹಿತಿ ಮತ್ತು ರಸ್ತೆ ಚಾಲಕರ ಸುರಕ್ಷತೆಗಾಗಿ ಕಾರ್ಯಕ್ರಮಗಳು ಹಾಗೂ ಮಕ್ಕಳಲ್ಲಿ ಒಂದು ನಿಮಿಷ ವಿಡಿಯೋ ನಿರ್ಮಾಣ ಸ್ಪರ್ಧೆ, ಎಲ್ಲಾ ಜಿಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ನಮ್ಮ ರೋಟರಿ ಜಿಲ್ಲೆಯನ್ನು ಅತ್ಯುತ್ತಮ ಜಿಲ್ಲೆಯನ್ನಾಗಿ ಮಾಡಲು ನಿಮ್ಮೆಲ್ಲರ ಸಹಕಾರವನ್ನು ಅಪೇಕ್ಷಿಸುತ್ತೇನೆ, ಜಿಲ್ಲೆಯಲ್ಲಿ ಒಟ್ಟು 87 ಇಂಟರಾಕ್ಟ್ ಕ್ಲಬ್‌ಗಳನ್ನು ಸ್ಥಾಪಿಸುವುದು ಮತ್ತು 44 ರೋಟರಾಕ್ಟ್ ಕ್ಲಬ್‌ಗಳ ಸ್ಥಾಪನೆ ಮತ್ತು ರೋಟರಿ ಸದಸ್ಯರ ಸಂಖ್ಯೆಯನ್ನು 4500 ಅಂಚಿಗೆ ಕೊಂಡೊಯ್ಯುವುದು ನನ್ನ ಗುರಿಯಾಗಿದೆ, ನಿಮ್ಮೆಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇನೆ

**ಕೆ. ಪಾಲಾಕ್ಷ**
**ಜಿಲ್ಲಾ ಗವರ್ನರ್ 2025–26**

---

## ವಲಯ 1 ರ ಸಹಾಯಕ ಗವರ್ನರ್ – ರೊ. ಪಿಎಚ್‌ಎಫ್ ಐ. ನಾರಾಯಣ



ಕುಂದಾಪುರ ತಾಲೂಕು ಇಡೂರಿನ ದಿ. ಮುತ್ತಯ್ಯ ಮತ್ತು ದುರ್ಗಮ್ಮ ದಂಪತಿಗಳ ಮಗನಾಗಿ 1954ರ ಸೆಪ್ಟೆಂಬರ್ 25 ರಂದು ಜನಿಸಿದ ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ವಂಡ್ಸೆ ಹಾಗೂ ಕೊಲ್ಲೂರುಗಳಲ್ಲಿ ಪೂರೈಸಿ, ಮಂಗಳೂರು ಸರಕಾರಿ ಶಿಕ್ಷಕರ ಶಿಕ್ಷಣ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದು 1974ರಲ್ಲಿ ವೃತ್ತಿ ಜೀವನ ಆರಂಭಿಸಿದರು. ಕಾರ್ಕಳ ತಾಲೂಕಿನ ಕುಂಟಾಡಿ, ಕುಂದಾಪುರ ತಾಲೂಕಿನ ಕಕುರ್ಂಜೆ, ಬೈಂದೂರು ತಾಲೂಕಿನ ಉಪ್ಪುಂದ, ಕಂಬದ ಕೋಣೆ, ಹೆರಂಜಾಲು ಶಾಲೆಗಳಲ್ಲಿ ಸುದೀರ್ಘ 40 ವರ್ಷಗಳಿಗೂ ಅಧಿಕಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿರುತ್ತಾರೆ.

2016ರಲ್ಲಿ ರೋಟರಿ ಕ್ಲಬ್ ಬೈಂದೂರಿನ ಸದಸ್ಯರಾಗಿ ರೋಟರಿ ಚಟುವಟಿಕೆಯಲ್ಲಿ ಕಾಣಿಸಿಕೊಂಡ ಇವರು 2018–19ರ ಸಾಲಿಗೆ ಬೈಂದೂರು ರೋಟರಿಯ ಅಧ್ಯಕ್ಷರಾಗಿ ಕ್ಲಬ್ಬನ್ನು ಅತ್ಯಂತ ಯಶಸ್ವಿಯಾಗಿ ಮುನ್ನಡೆಸಿದರು. ನಂತರದ ವರ್ಷಗಳಲ್ಲಿ ವಲಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ರೋಟರಿ ಲಿಟರಸಿ ಮಿಷನ್ ಇದರ ಚೇರ್ಮನ್ ಆಗಿ 2024 –25ರ ಸಾಲಿನ RILM ವೈಸ್ ಚೇರ್ಮನ್ ಆಗಿ ರೋಟರಿ ಸೇವೆಯಲ್ಲಿ ನಾಯಕರಾಗಿ ಗುರುತಿಸಿಕೊಂಡವರು.

ರೋಟರಿಯ ಹೊರಗೂ ವಿವಿಧ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಇವರು ಉಡುಪಿ ಜಿಲ್ಲೆಯ ಪ್ರತಿಷ್ಠಿತ ಟೀಚರ್ಸ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಹತ್ತು ವರ್ಷಗಳ ಕಾಲ ನಿರ್ದೇಶಕರಾಗಿ, ಒಂದು ಅವಧಿಗೆ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಕುಂದಾಪುರ ತಾಲೂಕು ಸರಕಾರಿ ನೌಕರರ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ, ಕ್ರೀಡಾ ಕಾರ್ಯದರ್ಶಿಯಾಗಿ, ರಾಜ್ಯ ಸರಕಾರಿ ಪ್ರಾಥಮಿಕ ಶಿಕ್ಷಕರ ತಾಲೂಕು ಸಂಘದ ಪ್ರತಿನಿಧಿಯಾಗಿ, ಪ್ರಸಕ್ತ ಬೈಂದೂರು ತಾಲೂಕು ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಾಗಿ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ. ಉಪ್ಪುಂದದ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯರಾಗಿ, ಉಪ್ಪುಂದ ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಧಾರ್ಮಿಕ ಹಾಗೂ ರಾಜಕೀಯವಾಗಿಯೂ ಸೇವೆ ಸಲ್ಲಿಸಿದ ಅನುಭವ ಇವರಿಗಿದೆ.

ವಿದ್ಯಾರ್ಥಿಯಾಗಿರುವಾಗಲೇ ಉತ್ತಮ ಕ್ರೀಡಾಪಟುವಾಗಿದ್ದ ಇವರು ರಾಜ್ಯಮಟ್ಟದ ಓಟಗಾರ; ಕಬಡ್ಡಿ ಮತ್ತು ವಾಲಿಬಾಲ್ ಆಟಗಾರ. ಹಾಗೂ ತರಬೇತುದಾರರೂ ಕೂಡ.

ಸಾಮಾಜಿಕ ಸೇವೆಯಲ್ಲಿ ಗಂಡನೊಂದಿಗೆ ಸಹಭಾಗಿಯಾಗಿರುವ ನಿವೃತ್ತ ಶಿಕ್ಷಕಿ ರೊ. ಕೆ. ಶಾರದ ಇವರ ಪತ್ನಿ, ಬೈಂದೂರು ಇನ್ನರ್ ವೀಲ್ ಕ್ಲಬ್ಬಿನ ಈ ವರ್ಷದ ಚುನಾಯಿತ ಅಧ್ಯಕ್ಷರು. ಪುತ್ರಿ –ಪುತ್ರ ಉಭಯ ಮಕ್ಕಳಿಗೆ ಜನ್ಮದಾತರಾದ ಇವರು ಹಲವು ವರ್ಷಗಳಿಂದ ಉಪ್ಪುಂದದಲ್ಲಿ ವಾಸವಾಗಿದ್ದು ಸಾಮಾಜಿಕ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

## ಅಸಿಸ್ಟೆಂಟ್ ಗವರ್ನರ್ ಸಂದೇಶ

ವಿಶ್ವದ ಅನನ್ಯ ಸ್ವಯಂ ಸೇವಾ ಸಂಸ್ಥೆಗಳಲ್ಲಿ ರೋಟರಿ ಸಂಸ್ಥೆಗೆ ವಿಶೇಷವಾದ ಸ್ಥಾನಮಾನವಿದೆ. ಅದರ ಉತ್ಕೃಷ್ಟವಾದ ಸೇವಾ ವಿಧಾನ, ತತ್ವಗಳಿಗನುಗುಣವಾದ ಕಾರ್ಯನಿರ್ವಹಣೆಯೇ ಈ ಹಿರಿಮೆ– ಗರಿಮೆಗೆ ಕಾರಣ.

ಸ್ನೇಹದೊಂದಿಗೆ ಸೇವೆಯನ್ನು ನೀಡುವಲ್ಲಿ ಹೊಸ ನಾಯಕತ್ವದೊಂದಿಗೆ ಪ್ರತಿವರ್ಷವೂ ರೋಟರಿ ಸಜ್ಜಾಗುವ ರೀತಿಯೇ ಚೇತೋಹಾರಿಯಾದದ್ದು. ಈ ದಿಸೆಯಲ್ಲಿ ಅಂತರಾಷ್ಟ್ರೀಯ ಅಧ್ಯಕ್ಷ ರೊ. ಫ್ರಾನ್ಸೆಸ್ಕೊ ಅರೆಝೊ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ. ಕೆ. ಅವರ ನೇತೃತ್ವದಲ್ಲಿ ನಾವು ಮುನ್ನಡೆಯಬೇಕಾಗಿದೆ.

ಸ್ನೇಹ ಮತ್ತು ಸೇವೆಯ ಮೂಲಕ ಜಗತ್ತಿನ ಶಾಂತಿ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಬಹುದೆಂಬುದು ಬುದ್ಧಿಜೀವಿಗಳ ಶಾಂತಿಪ್ರಿಯರ ಅಂಬೋಣ. ಈ ಮಹತ್ತರ ಕಾರ್ಯ ಸಾಧನೆಗಾಗಿಯೇ ಒಳಿತಿಗಾಗಿ ಒಟ್ಟಾಗೋಣ ಎಂಬುದು ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಈ ವರ್ಷದ ಧ್ಯೇಯ ವಾಕ್ಯ. ಈ ಒಟ್ಟಾಗುವಿಕೆಯಲ್ಲಿ ಹೊಸ ಸ್ನೇಹಿತರನ್ನು ಒಂದಾಗಿಸಿಕೊಂಡು ಒಳಿತಿಗಾಗಿ ಹೊಸ ಅವಕಾಶಗಳನ್ನು ಸೃಷ್ಟಿಸಿಕೊಳ್ಳೋಣ.

ನಮ್ಮ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ. ಕೆ. ಯವರು ವರ್ತಮಾನದ ಕಾಲಘಟ್ಟಕ್ಕೆ ಅತ್ಯಂತ ಪ್ರಸ್ತುತವೆನಿಸುವ 1. ಆರೋಗ್ಯ 2. ಶಿಕ್ಷಣ 3. ಪರಿಸರ 4. ರಸ್ತೆ ಸುರಕ್ಷೆ ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಯೋಚಿಸಿದ್ದಾರೆ. ಈ ಯೋಜನೆಯನ್ನು ವರ್ಷವಿಡೀ ಸಮರ್ಪಕವಾಗಿ ನಿರ್ವಹಿಸಲು ಪ್ರಯತ್ನಿಸೋಣ.

ರೋಟರಿಯಲ್ಲಿ ಸದಸ್ಯತ್ವ ಅಭಿವೃದ್ಧಿ ಎಂಬುದು ಸಂಕೀರ್ಣ ಹಾಗೂ ಸವಾಲಿನ ವಿಷಯ. ಜಿಲ್ಲಾ ಗವರ್ನರ್ ನೀಡಿದ ಸಲಹೆಯ ಮೇರೆಗೆ ಮಹಿಳಾ ಸದಸ್ಯರನ್ನು ಒಳಗೊಂಡಂತೆ ಹೆಚ್ಚೆಚ್ಚು ಹೊಸ ಸದಸ್ಯರನ್ನು ಸೇರಿಸುವುದರ ಮೂಲಕ ಕ್ಲಬ್ಬು ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರೋಟರಿ ಸದಸ್ಯರ ಸಂಖ್ಯಾಬಲವನ್ನು ಹೆಚ್ಚಿಸೋಣ. ನಿಮ್ಮೆಲ್ಲರ ಸಹಕಾರ ಇರಲಿ.

ರೋಟರಿ ದತ್ತಿ ನಿಧಿಗೆ ನೂರು ಪ್ರತಿ ಶತ ದೇಣಿಗೆ ನೀಡಿ, ವಿಶ್ವದ ಮಾರಕವಾದ ವಿನಾಶಕಾರಿ ರೋಗಮುಕ್ತ ಹಾಗೂ ಹಸಿವು ಮುಕ್ತ ಸಮಾಜವನ್ನು ಕಟ್ಟೋಣ.

ಕಬ್ಬಿನ ಕಾರ್ಯಕ್ರಮಗಳನ್ನು rotaryIndia.org ನಲ್ಲಿ ಅಪ್ಲೋಡ್ ಮಾಡಿ ರೋಟರಿಯ ಸಾಧನೆಗಳನ್ನು ಜನಮಾನಸಕ್ಕೆ ಮುಟ್ಟಿಸಿ ಶ್ರಂಗ ಸಾರ್ಥಕ್ಯವನ್ನು ಪಡೆಯೋಣ.

ಎಲ್ಲಾ ಕ್ಲಬ್ಬುಗಳ ಅಧ್ಯಕ್ಷ ಸದಸ್ಯರು ತಮ್ಮ ಅನಿಸಿಕೆ, ಸಮಸ್ಯೆ,ಸಲಹೆ ಸಂದೇಹಗಳ ನಿವಾರಣೆಗಾಗಿ ಮುಜುಗರವಿಲ್ಲದೆ ಸ್ನೇಹ ಪೂರ್ವಕ ಸಂವಾದ ಮಾಡೋಣ. ರೋಟರಿಯನ್ನು ಆನಂದಿಸುತ್ತಾ ಅರ್ಥಪೂರ್ಣವಾಗಿ ಈ ವರ್ಷವನ್ನು ಕಳೆಯೋಣ .

ಎಲ್ಲರಿಗೂ ಹಾರ್ದಿಕ ಶುಭಾಶಯಗಳು. ಜೈ ರೋಟರಿ

**ರೊ. ಐ. ನಾರಾಯಣ**

**ಅಸಿಸ್ಟೆಂಟ್ ಗವರ್ನರ್ 2025–26**

## ವಲಯ 1 ರ ವಲಯ ಸೇನಾನಿ – ರೊ. ಕೌಶಿಕ್ ಯಡಿಯಾಳ



ಕೌಶಿಕ್ ಯಡಿಯಾಳ ಬರೇಗುಂಡೆ 1986 ಸೆಪ್ಟೆಂಬರ್ 17ರಂದು ಜನಿಸಿ, ಪದವಿ ಪೂರ್ವ ಶಿಕ್ಷಣವನ್ನು ಕುಂದಾಪುರದಲ್ಲಿ ಪಡೆದು, ಇಂಜಿನಿಯರಿಂಗ್ ಪದವಿಯನ್ನು ಬೆಂಗಳೂರಿನಲ್ಲಿ ಪಡೆದಿರುತ್ತಾರೆ. ಪ್ರಸ್ತುತ ಶ್ರೀ ಗೌರಿ ಇನ್ಫ್ರಾಸ್ಟ್ರಕ್ಚರ್ಸ್ ಎಂಬ ಸಂಸ್ಥೆ ಹಾಗೂ ಶ್ರೀ ಬ್ರಾಹ್ಮೀ ಸಾಲಿಡ್ ಬ್ಲಾಕ್ಸ್ ಎಂಬ ಸಂಸ್ಥೆಗಳನ್ನು ನಡೆಸುತ್ತಿದ್ದಾರೆ, ಅಶ್ವಮೇಧ ಎನರ್ಜಿ ಎಂಬ ಸೋಲಾರ್ ಕಂಪನಿಯ ಪಾಲುದಾರರು ಆಗಿರುತ್ತಾರೆ. 2012 ನೇ ಇಸವಿಯಲ್ಲಿ ರೋಟರಿ ಕ್ಲಬ್ ಸಿದ್ದಾಪುರ ಹೊಸಂಗಡಿಯ ಮೂಲಕ ರೋಟರಿ ಸೇರಿ, 2018–19ರಲ್ಲಿ ಕಾರ್ಯದರ್ಶಿಯಾಗಿ, 2020–21ರಲ್ಲಿ ಕುಂದಾಪುರ ರಿವರ್ ಸೈಡ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ. 2023 ರಲ್ಲಿ ನಡೆದ ಜಿಲ್ಲಾ ಕ್ರೀಡಾಕೂಟ "ಕುಂದಯಾನ"ದ ಖಜಾಂಚಿಯಾಗಿ ಕೆಲಸ ಮಾಡಿರುತ್ತಾರೆ. ಇವರು ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಆಂಡ್ ಅರ್ಕಿಟೆಕ್ಟ್ಸ್, ಕುಂದಾಪುರ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಕ್ರಿಯ ಸದಸ್ಯರಾಗಿದ್ದಾರೆ. ಪತ್ನಿ ರಜನಿ ಹಾಗೂ ಮಗ ಈಶ ಇವರ ಕುಟುಂಬ. ಇವರೇ ನಮ್ಮ ವಲಯ ಸೇನಾನಿ ಕೌಶಿಕ್ ಯಡಿಯಾಳ.

### ವಲಯ 1 ರ ವಲಯ ಸೇನಾನಿ ರೊ. ಕೌಶಿಕ್ ಯಡಿಯಾಳರ ಸಂದೇಶ

ವರುಷ 2024–25 ರ ಸಾಲಿನಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣವನ್ನು ತನ್ನ ವಿನೂತನವಾದ ಕಾರ್ಯ ಚಟುವಟಿಕೆಗಳಿಂದ ಮುನ್ನಡೆಸಿದ ರೊ. ಜುಡಿತ್ ಮೆಂಡೋನ್ಸಾ ಹಾಗೂ ಕಾರ್ಯದರ್ಶಿ ರೊ. ಭರತ್ ಶೆಟ್ಟಿ ತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. 2025–26 ರ ಸಾಲಿಗೆ ಅಧ್ಯಕ್ಷರಾಗಿ ಆಯ್ಕೆ ಆದ ರೊ. ಸಚಿನ್ ನಕ್ಕತ್ತಾಯ ಹಾಗೂ ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ತ ತಂಡಕ್ಕೆ ತಮ್ಮ ವರುಷವು ಅತ್ಯಂತ ಯಶಸ್ವಿ ವರುಷವಾಗಿ ಮೂಡಿಬರಲಿ ಎಂದು ಶುಭಹಾರೈಸುತ್ತಾ ತಮ್ಮ ವರುಷದಲ್ಲಿ ರೋಟರಿ ಅಂತರಾಷ್ಟ್ರೀಯ ಈ ವರುಷದ ಯೋಜನೆಗಳು ನೆರವೇರಲಿ ಎಂದು ಹಾರೈಸುತ್ತೇನೆ.

---

## Know our Chief Guest of Installation Ceremony:
## Dr. Niranjan Rao, B.A.M.S., M.D. (Ayu)



Professor & Head – Dept. of Panchakarma
Vice-Principal, SDM College of Ayurveda & Hospital, Udupi
Former Dean – P.G. & Ph.D. Studies
Consultant Ayurveda Physician

**PROFESSIONAL SUMMARY**

An accomplished Ayurvedic physician, academician, and researcher with over 27 years of experience in clinical practice, teaching, and institutional leadership. Renowned for his expertise in Panchakarma, Kayachikitsa, and Rasayana-Vajikarana therapies. Known for a compassionate approach to patient care, visionary academic mentorship, and exceptional contributions to Ayurvedic research and global advocacy.

**AREAS OF EXPERTISE**

- ❖Panchakarma & Kayachikitsa
- ❖ Rasayana & Vajikarana
- ❖ Infertility & Reproductive Health
- ❖ Neuro-Muscular and Gastrointestinal Disorders
- ❖ Dermatological Conditions
- ❖ Clinical Research & Thesis Guidance
- ❖ Academic Leadership & Mentorship

**EDUCATION**

**M.D. (Ayu) – Kayachikitsa**
**Gujarat Ayurveda University, Jamnagar**
**❖ Gold Medalist**
**B.A.M.S. (Bachelor of Ayurvedic Medicine and Surgery)**
S.D.M. College of Ayurveda & Hospital, Udupi
**❖ University Rank Holder, Multiple Gold Medals**

**PROFESSIONAL EXPERIENCE**

Professor & Head – Dept. of Panchakarma
Vice-Principal, SDM College of Ayurveda & Hospital, Udupi
Also served as Dean, P.G. & Ph.D. Studies

- ❖ Leading the Department of Panchakarma with a focus on evidence-based clinical treatments.
- ❖ Specializes in the holistic management of infertility, autoimmune conditions, neurological disorders, and chronic gastrointestinal diseases
- ❖ Supervise postgraduate and doctoral research programs.
- ❖ Treat the highest number of patients in OPD and IPD in the institution's history.
- ❖ Guided and co-guided over 50 postgraduate theses.
- ❖ Pioneered advanced clinical protocols for infertility, neuro-muscular, gastrointestinal, and skin disorders.

❖ Member of Ayurveda Sub Committee in Planning Commission of Govt. of India in the year 2013
❖ Member of Syllabus committee of UG,PG and DM of National commission for Indian Systems of Medicines.

**RESEARCH & PROJECTS**

❖ Principal/Co-investigator in various RGUHS-affiliated research projects.
❖ Extensive research contributions in Rasayana and Vajikarana disciplines.
❖ Active thesis guide for postgraduate scholars with specialization in Panchakarma and Kayachikitsa.

**RESEARCH & PUBLICATIONS**

Total 8 clinical study and research done on different diseases were Published.

**INTERNATIONAL EXPERIENCE**

❖ Delivered lectures in Switzerland and France on Ayurvedic concepts and therapies.
❖ Advisor to Government Paediatric Hospital, Bern, Switzerland for Ayurveda integration.

**AFFILIATIONS & HONORARY POSITIONS**

❖ Advisory Board Member, Trans-Disciplinary University
❖ Mentor, Rashtriya Ayurveda Vidyapeeth, New Delhi
❖ Active speaker and keynote contributor at national and international Ayurveda forums.

**HONORS**

❖ Acknowledged as one of the busiest and most effective Ayurvedic physicians in Udupi region.
❖ Revered mentor and teacher to hundreds of Ayurveda graduates and postgraduates.

## Our Installation Officer - Rtn. PDG. PHF. Abhinandan A. Shetty



Rtn. Abhinandan A. Shetty, lovingly called "Abhi", was born on 12th December 1972. He had his early education in Kundapura and completed his Bachelor in Business Management (B.B.M.) Degree from St. Aloysius College, Mangalore. Mr Shetty acquired the degree of B.A (Inter Departmental Studies) from Schiller International University, Strasbourg, France and his M.B.A (International Business) from Schiller International University in London, U. K. During his student days Mr Shetty has extensively traveled throughout Europe and United States. He is currently managing their family business & establishments, which include Hotels, Resorts, Plantations, and Educational institutions.

A third generation Rotarian Abhinandan is a member of Rotary Kundapura South. He joined the Rotary movement as a Rotaractor in 1998 as member of Kundapura South and later became its president 1999-00. During his tenure the club has won many laurels to its credit. He was the District Community Service Director and was awarded Best District Director then. He was the team leader of the Inter District Youth Exchange Program team that visited Nepal and West Bengal (R. I. Dist. 3290) in the year 1998. **He was the District Rotaract Representative of R.I. District 3180 during 2002 – 03 and was one of the most successful DRR's of R.I. District 3180**.

He was the President of Rotary Kundapura South in 2011-12. Mr Shetty was the Assistant governor of Zone1, RI Dist 3180 for 2012-13

In the year 2006 – 07 he was the District Rotaract Chairman and has been responsible in starting 40 new Rotaract Clubs which has been the highest ever in the District. He has been a effective counselor in all the Rotaract training seminars, District Rotaract Assembly and RYLA since 2002. He is also a regular resource person at the Rotary District and Zonal events. He has attended the Rotary International Convention at LOS ANGELES USA in 2008, LISBON PORTUGAL in 2013, ATLANTA USA in 2017 and HAMBURG GERMANY in 2019.

He has attended a number of RYLA's since 1999 both at the District and National Level. **He was a counselor at the International RYLA – 2008 at LOS ANGELES USA.** He was the chairman for ROTASIA-2014, Rotaract South Asia conference held in Mysore in Jan 2014. Rtn **Abhinandan Shetty was elected unopposed as the District Governor for RI District 3182 for the year 2018-19 and was the youngest Governor of the district to assume office**. He was the joint secretary of the Rotary zone institute 2019 held at Indore, Madhya Pradesh. **He was the Asst Rotary public image co-ordinator of zone 7 for the year 2020-**21and **2023-24. He has served as Assistant Rotary coordinator of zone 7 in the year 2024-25 . He has been appointed as Rotary public image coordinator (RPIC) for zone 7 from 2025-28**. During his Governorship he was awarded as the star performer for public image and 100 percent contribution to The Rotary Foundation. RTN Shetty was instrumental in organizing polio awareness rallies in all 8 Revenue Districts of RI District 3180 since his Rotaract days. Road safety traffic awareness movement initiated by him is very well accepted by the general public and the Rotary clubs in Districts 3181 and 3182.This has been now taken up as a continuing District project in RID 3182**.** Mr Shetty is a Major Donor to the Rotary Foundation. He was the Rotary International Presidents special Representative to the District conference of RI District 3020 in the year 2020-21at Vijayawada and to RI district 3261, Bhilai ,chattisgarh in 2022-23 .He is the District Trainer of RI Dist 3182 for the year 2022-23 and 2023-24. He was the chairman for the Rotaract seminar at Rotary zone institute in Bangalore in Dec 2023 and Vice chair of TEJAS Rotary zone institute at New Delhi in 2025. **PDG Abhinandan Shetty will be serving on the joint strategic planning committee of Rotary International which advises the Rotary International Board and the Foundation on matters relating to the Action plan of the organization from 2025-2029.**

Apart from Rotary, Abhi is associated with a number of social and youth organisations in D.K. and Udupi District. He has been Awarded the District Rajyotsava Award by the Government of karnataka for his meritorious service to the society in 2024. Married to Ann Neetha, past president of Innerwheel club of Kundapura south and is blessed with a son Ahish and daughter Ahana.

## ನಿರ್ಗಮನ ಕಾರ್ಯದರ್ಶಿ ವರದಿ (2024–25)

### 1. Vocational Service :

- ಜುಲೈ 1ರಂದು ವೈದ್ಯರ ದಿನದ ಆಚರಣೆಯ ಸಂದರ್ಭದಲ್ಲಿ ನಮ್ಮ ಅಸಿಸ್ಟೆಂಟ್ ಗವರ್ನರ್ ಆದ ಡಾ. ಬಿ. ರಾಜೇಂದ್ರ ಶೆಟ್ಟಿ ಮತ್ತು ನಮ್ಮ ಕ್ಲಬ್ಬಿನ 10 ವೈದ್ಯರುಗಳಾದ ರೊ. ಡಾ. ವಿಶ್ವೇಶ್ವರ, ರೊ. ಡಾ. ಉಮೇಶ್ ಪುತ್ರನ್, ರೊ. ಡಾ. ಆದರ್ಶ ಹೆಬ್ಬಾರ್, ರೊ. ಡಾ. ಪ್ರಿಯಾಂಕ ಜೋಗಿ, ರೊ. ಡಾ. ನಾಗೇಶ್, ರೊ. ಡಾ. ಪ್ರಸನ್ನ ಐತಾಳ್, ರೊ. ಡಾ. ರಾಜೇಶ್ ಬಾಯರಿ. ರೊ. ಡಾ. ಅನುಲೇಖಾ ಬಾಯರಿ, ರೊ. ಡಾ. ರಾಮ್‌ಮೋಹನ್, ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಇವರನ್ನು ಅವರವರ ಸೇವಾ ಸ್ಥಳಗಳಲ್ಲಿ ಅವರ ಸೇವೆಗಾಗಿ ಸನ್ಮಾನಿಸಿದೆವು.
- ನಮ್ಮ ಕ್ಲಬ್ಬಿನ ಲೆಕ್ಕ ಪರಿಶೋಧಕರಾದ ಶಾಂತಾರಾಮ್ ನಾಯಕ್‌ರವರನ್ನು ಲೆಕ್ಕ ಪರಿಶೋಧಕರ ದಿನಾಚರಣೆ ಪ್ರಯುಕ್ತ ಅವರ ಕಛೇರಿಯಲ್ಲಿ ಸನ್ಮಾನಿಸಲಾಯಿತು.
- ಜುಲೈ 18ರಂದು ಉಡುಪಿಯ ಪ್ರಖ್ಯಾತ ಸ್ತ್ರೀರೋಗ ತಜ್ಞೆ ಡಾ। ರಾಜಲಕ್ಷ್ಮಿಯವರನ್ನು ವಾರದ ಸಭೆಯಲ್ಲಿ ಸನ್ಮಾನಿಸಲಾಯಿತು.
- ತಾ. 25–07–2024ರಂದು ಖ್ಯಾತ ಹವ್ಯಾಸಿ ಕಲಾವಿದರೂ, ಸಾಮಾಜಿಕ ಕಾರ್ಯಕರ್ತರೂ ರೋಟರಿ ಕ್ಲಬ್ ಬ್ರಹ್ಮಾವರದ ಮಾಜಿ ಅಧ್ಯಕ್ಷರೂ ಆದ ರೊ. ಆಲ್ವಿನ್ ಅಂದ್ರಾದೆಯವರನ್ನು ಕ್ಲಬ್ಬಿನ ಸಭೆಯಲ್ಲಿ ಗುರುತಿಸಿ ಸನ್ಮಾನಿಸಲಾಯಿತು.
- ತಾ. ಆಗಸ್ಟ್ 15ರಂದು – ಸಂಚಾರಿ ನಿಯಮಗಳ ಬಗ್ಗೆ ಅರಿವು ಮೂಡಿಸಲು ಆಗಮಿಸಿದ ನಿವೃತ್ತ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಶ್ರೀ ವಿಶ್ವನಾಥ ನಾಯಕ್‌ರವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ತಾ. ಆಗಸ್ಟ್ 15ರಂದು – ಸಂಚಾರಿ ಉಪನಿರೀಕ್ಷಕರಾದ ಠಾಣಾಧಿಕಾರಿ ಶ್ರೀ ಪ್ರಸಾದ್‌ರವರನ್ನು ಕುಂದಾಪುರದಲ್ಲಿ ಅವರು ನೀಡುತ್ತಿರುವ ಸೇವೆಗಾಗಿ ಕ್ಲಬ್ ವತಿಯಿಂದ ಸನ್ಮಾನಿಸಲಾಯಿತು.
- ತಾ. ಆಗಸ್ಟ್ 22ರಂದು – ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದ ಕೃಷಿಕ ಶ್ರೀ ಗಿರೀಶ್ ಐತಾಳ್‌ರವರನ್ನು ವಾರದ ಸಭೆಯಲ್ಲಿ ಸನ್ಮಾನಿಸಲಾಯಿತು.
- ಆಗಸ್ಟ್ 29ರಂದು – ಯಕ್ಷಗಾನ ಕಲಾವಿದರಾದ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಎ. ರಾಜಶೇಖರ್ ಹೆಬ್ಬಾರ್ ಮತ್ತು ಶ್ರೀ ಪಿ. ಶ್ರೀನಿವಾಸ್ ಉಪಾಧ್ಯಾಯರನ್ನು ಕ್ಲಬ್ಬಿನ ಪರವಾಗಿ ಸನ್ಮಾನಿಸಲಾಯಿತು.
- ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ ನಮ್ಮ ಕ್ಲಬ್ಬಿನ ರೊ. ಡಾ। ರಮೇಶ್ ಶೆಟ್ಟಿ, ರೊ. ನಂದಾ ನಾಯಕ್ ಮತ್ತು ಶ್ರೀ ಯೋಗಿಶ್ ಬಂಕೇಶ್ವರ್, Training Officer, ನಾಡಾ ಐಟಿಐ ಇವರನ್ನು ಸನ್ಮಾನಿಸಲಾಯಿತು.
- ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ RCC ಸಭೆಯಲ್ಲಿ ನಿವೃತ್ತ ಶಿಕ್ಷಕ ಶ್ರೀ ಅರುಣ್ ಕುಮಾರ್ ಶೆಟ್ಟಿ, ಅಧ್ಯಾಪಕರು ತಲ್ಲೂರು ಸರಕಾರಿ ಹಿ.ಪ್ರಾ. ಶಾಲೆ ಹಾಗೂ ಇವರ ಪತ್ನಿ ಶಿಕ್ಷಕಿ ಶ್ರೀಮತಿ ಗೀತಾ ಇವರನ್ನು ಸನ್ಮಾನಿಸಲಾಯಿತು.
- ತಾ. ಸೆಪ್ಟಂಬರ್ 26ರಂದು – ಇಂಜಿನಿಯರ್ಸ್ ಡೇ ಪ್ರಯುಕ್ತ ನಮ್ಮ ಸದಸ್ಯರಾದ ರೊ. ಸತ್ಯನಾರಾಯಣ ಪುರಾಣಿಕರನ್ನು – ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ತಾ. ಸೆಪ್ಟಂಬರ್ 26ರ ವಾರದ ಸಭೆಯಲ್ಲಿ ಡಾ. ಪ್ರಕಾಶ್ ತೋಳಾರ್, ಮನೋರೋಗ ತಜ್ಞರು ಇವರನ್ನು ಸನ್ಮಾನಿಸಲಾಯಿತು.
- 10ನೇ ತಾರೀಖಿನಂದು ಸರಕಾರಿ ಆಸ್ಪತ್ರೆ ಹಟ್ಟಿಯಂಗಡಿ ವೈದ್ಯರಾದ ಡಾ. ವೈ. ರಂಗನಾಥ್‌ರವರನ್ನು ಗುರುತಿಸಿ ಸನ್ಮಾನಿಸಲಾಯಿತು. ಸಮುದಾಯ ಆರೋಗ್ಯಕ್ಕಾಗಿ ಅವರ ಸೇವೆಯನ್ನು ಕೊಂಡಾಡಿದೆವು.
- ದಿನಾಂಕ 12–10–2024ರಂದು ನಮ್ಮ ಸಂಸ್ಥೆಯ ರೊ. ಡಾ. ಉಮೇಶ್ ಪುತ್ರನ್‌ರವರನ್ನು ಅವರ ಆಸ್ಪತ್ರೆಯಲ್ಲಿ ಉಪಕರಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರನ್ನು ಅಭಿನಂದಿಸಿದೆವು. ಪಿಡಿಜಿ. ರೊ. ಅಭಿನಂದನ್ ಶೆಟ್ಟಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.
- 17–10–2024ರಂದು ಶ್ರೀ ಜಯಶೀಲ್ ಕುಮಾರ್, ಉಪ ಪ್ರಾಂಶುಪಾಲರು, IMJISC ಇವರನ್ನು ಸನ್ಮಾನಿಸಲಾಯಿತು. ಯುವ ಜನತೆಗೆ ಮಾರ್ಗದರ್ಶಕರೂ ಅತ್ಯುತ್ತಮ ಉಪನ್ಯಾಸಕರೂ ಆಗಿರುವ ಇವರಿಗೆ ಕ್ಲಬ್‌ನ ವತಿಯಿಂದ ಸನ್ಮಾನಿಸಲಾಯಿತು.
- ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪಡೆದ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರಿಗೆ ಸನ್ಮಾನಿಸಲಾಯಿತು.
- ನವೆಂಬರ್ 14ರಂದು ರಾಷ್ಟ್ರ ಪ್ರಶಸ್ತಿ ವಿಜೇತ ರಂಗ ಕಲಾವಿದರಾದ ಶ್ರೀ ಬಿ. ಎಸ್. ರಾಮ್ ಶೆಟ್ಟಿ ಹಾರಾಡಿ ಇವರನ್ನು ಸನ್ಮಾನಿಸಲಾಯಿತು.
- ನವೆಂಬರ್ 20ರಂದು ವಕೀಲರಾದ ಶ್ರೀ ವೈ. ಶರತ್ ಶೆಟ್ಟಿ ಕಾನೂನಿನಲ್ಲಿ ಇವರ ಸೇವೆಗಾಗಿ ಇವರನ್ನು ಸನ್ಮಾನಿಸಲಾಯಿತು.
- 20–11–2024ರಂದು ಟ್ರಾಫಿಕ್ ಇನ್ಸ್‌ಫೆಕ್ಟರ್ ಶ್ರೀ ಸುರೇಶ್ ಇವರನ್ನು ಜನಜಾಗೃತಿ ಮೂಡಿಸುವ ರಸ್ತೆ ಸುರಕ್ಷಾ ಕಾರ್ಯಕ್ರಮಕ್ಕಾಗಿ ಸನ್ಮಾನಿಸಲಾಯಿತು.
- ಕುಂದಾಪುರ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಿನೋದ್‌ಕ್ರಾಸ್ತಾರವರನ್ನು ಅಭಿನಂದಿಸಿ ಸನ್ಮಾನಿಸಿದೆವು. ಪಿಡಿಜಿ. ರೊ. ಸದಾನಂದ ಛಾತ್ರಾ ಉಪಸ್ಥಿತರಿದ್ದರು.
- ತಾ. 12–12–24ರಂದು ಜಿಲ್ಲಾ ಗವರ್ನರ್ ಅಧಿಕೃತ ಭೇಟಿ ಸಂದರ್ಭದಲ್ಲಿ ಉತ್ತಮ ಸಮಾಜ ಸೇವೆಗಾಗಿ ಸರಕಾರದಿಂದ ಗುರುತಿಸಿ – ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದ PDG. ಅಭಿನಂದನ್ ಶೆಟ್ಟಿಯವರನ್ನು ಜಿಲ್ಲಾ ಗವರ್ನರ್ ರೊ. C.A. ದೇವಾನಂದರವರು ಸನ್ಮಾನಿಸಿದರು.
- ತಾ. 12–12–24ರಂದು ಸಮಾಜ ಸೇವಕರೂ, ಪರಿಸರ ಪ್ರೇಮಿಗಳೂ ಸಾವಿರಾರು ಕಡಲಾಮೆಗಳನ್ನು ಸಂರಕ್ಷಿಸಿರುವ ಶ್ರೀ ದಿನೇಶ್ ಸಾರಂಗ್‌ರವರನ್ನು ಸನ್ಮಾನಿಸಿದೆವು.

  ತಾ. 12–12–24ರಂದು ನಮ್ಮೂರಿನ ಯುವ ಪ್ರತಿಭೆ – ಕ್ರೀಡಾಪಟು Weight Lifting ಮತ್ತು Power Liftingನಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ 47 ಚಿನ್ನದ ಪ್ರಶಸ್ತಿಗಳನ್ನು ಪಡೆದ ನಾಗಶ್ರೀ ಗಣೇಶ್ ಸೇರುಗಾರ್ ಅವರನ್ನು ಸನ್ಮಾನಿಸಲಾಯಿತು.
- ತಾ. 09–01–2025ರಂದು ನಮ್ಮ ಕ್ಲಬ್ಬಿನ ವತಿಯಿಂದ ರಾಷ್ಟ್ರ ಪ್ರಶಸ್ತಿ, ಸ್ವರ್ಣಕಮಲ ಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕರಾದ ಶ್ರೀ ಯಾಕೂಬ್ ಖಾದರ್ ಗುಲ್ವಾಡಿಯವರನ್ನು ಅವರ ಸಾಧನೆಗಾಗಿ ಸನ್ಮಾನಿಸಲಾಯಿತು.
- ತಾ. 16–01–25ರಂದು ನಮ್ಮ ಕ್ಲಬ್ಬಿನ ವತಿಯಿಂದ ಸಮಾಜಕ್ಕೆ ಆರೋಗ್ಯದ ಮಹತ್ವ ನೀಡುತ್ತಿರುವ ಮತ್ತು ಅನೇಕ ಸಂಘ ಸಂಸ್ಥೆಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ಸೇವೆ ನೀಡುತ್ತಿರುವ ಡಾ. ಸೋನಿ ಡಿಕೊಸ್ಟರವರನ್ನು ಸನ್ಮಾನಿಸಲಾಯಿತು.
- ತಾ. 02–02–25 ಜಿಲ್ಲಾ ಸಾಧಕ ರೈತ ಪ್ರಶಸ್ತಿ ವಿಜೇತ ತೆಕ್ಕಟ್ಟೆಯ ಹನುಮಾನ್ ರೈಸ್‌ಮಿಲ್ ಮಾಲಕರಾಗಿರುವ ಶ್ರೀ ರಮೇಶ್ ನಾಯಕ್‌ರವರನ್ನು ಕೃಷಿಯಲ್ಲಿ ಅವರ ಸಾಧನೆಗಾಗಿ ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ತಾ. 02–02–25 "ಕಾಡು ಕೃಷಿ ಲಾಭದಾಯಕ ಉದ್ಯಮ" – ಈ ವಿಚಾರದ ಬಗ್ಗೆ ಮಾಹಿತಿ ನೀಡಿದ ಅರಣ್ಯಾಧಿಕಾರಿ ಶ್ರೀ ಗಣಪತಿ ಅವರನ್ನು

ಸನ್ಮಾನಿಸಲಾಯಿತು.

- ತಾ. 02–02–25 ಸಾವಯವ ಕೃಷಿ ಮತ್ತು ತಾರಸಿಯಲ್ಲಿ ಭತ್ತದ ಕೃಷಿಯ ಬಗ್ಗೆ ಮಾಹಿತಿ ನೀಡಿದ ಶ್ರೀ ಕೃಷ್ಣಪ್ಪ ಗೌಡ ಪಡಂಬೈಲ್ ಇವರನ್ನು ಸನ್ಮಾನಿಸಲಾಯಿತು.
- ತಾ. 02–02–25 – ಗ್ರೀನ್ ಇಂಡಿಯ ಮೂವ್‌ಮೆಂಟ್ (ರಿ.) ಇದರ ಸ್ಥಾಪಕಾಧ್ಯಕ್ಷರಾದ ಶ್ರೀ ಮುನಿಯಾಲು ಗಣೇಶ್ ಶೆಣೈ ಇವರನ್ನು ಸನ್ಮಾನಿಸಲಾಯಿತು.
- ತಾ. 13–02–25 – ಶಿಕ್ಷಣ ಮತ್ತು ಮಾಧ್ಯಮ ಈ ವಿಚಾರದ ಬಗ್ಗೆ ಅರಿವು ಮೂಡಿಸಿದ ಪ್ರಾಧ್ಯಾಪಕರಾದ ಶ್ರೀ ನಿತ್ಯಾನಂದ ಗಾಂವ್ಕರ್, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಉಡುಪಿ ಇವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Day ಯುವ ಮೆರಿಡಿಯನ್‌ನಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಮಾಜಿ ಸಂಸದರು ಹಾಗೂ ಮಾಜಿ ಸಚಿವರಾದ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ ಇವರನ್ನು ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ಯುವ ಮೆರಿಡಿಯನ್‌ನಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Dayಯ ಕಾರ್ಯಕ್ರಮದಲ್ಲಿ ಉದ್ಯಮಿ ಹಾಗೂ ಗೀತಾನಂದ ಫೌಂಡೇಶನ್ ಮಣೂರು ಇದರ ಪ್ರವರ್ತಕರಾದ ಶ್ರೀ ಆನಂದ ಸಿ. ಕುಂದರ್ ಇವರನ್ನು ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ಯುವ ಮೆರಿಡಿಯನ್‌ನಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Dayಯ ಕಾರ್ಯಕ್ರಮದಲ್ಲಿ Lifeline Feeds Pvt. Ltd. , ಚಿಕ್ಕಮಗಳೂರು ಇದರ ಚೇರ್‌ಮ್ಯಾನ್ ಹಾಗೂ ಆಡಳಿತ ನಿರ್ದೇಶಕರಾದ ಶ್ರೀ ಕಿಶೋರ್ ಕುಮಾರ್ ಹೆಗ್ಡೆ ಇವರನ್ನು ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ಯುವ ಮೆರಿಡಿಯನ್‌ನಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Dayಯ ಕಾರ್ಯಕ್ರಮದಲ್ಲಿ Universal Group of Institutes ಬೆಂಗಳೂರಿನ ಸಂಸ್ಥಾಪಕರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ಇವರನ್ನು ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ಯುವ ಮೆರಿಡಿಯನ್‌ನಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Dayಯ ಕಾರ್ಯಕ್ರಮದಲ್ಲಿ ಭಾರತ ಸರಕಾರದ ಉನ್ನತ ಬಾಹ್ಯ ಗುಪ್ತಚರ ಸಂಸ್ಥೆಯ ಮಾಜಿ ಅಧಿಕಾರಿಗಳಾದ ಮತ್ತು ಹಾಲಿ GST ಅಧಿಕಾರಿಗಳಾದ ಸ್ಟೀಫನ್ ಎಂ. ಪಿ. ಡಯಾಸ್ ಇವರನ್ನು ಸನ್ಮಾನಿಸಲಾಯಿತು.
- ತಾ. 23–02–25 – ನಮ್ಮ ಕ್ಲಬ್ಬಿನ ನೇತೃತ್ವದಲ್ಲಿ ಯುವ ಮೆರಿಡಿಯನ್‌ನಲ್ಲಿ ನಡೆದ ಝೋನಲ್ ಕಾರ್ಯಕ್ರಮವಾದ World Understanding and Peace Dayಯ ಕಾರ್ಯಕ್ರಮದಲ್ಲಿ ಪರಿಸರ ಸಂರಕ್ಷಣೆಯ ಭಾಗವಾಗಿ ಕ್ಲೀನ್ ಕುಂದಾಪುರ ಪ್ರಾಜೆಕ್ಟಿನ ರೂವಾರಿಯಾದ ಶ್ರೀ ಭರತ್ ಬಂಗೇರರವರನ್ನು ಸನ್ಮಾನಿಸಲಾಯಿತು.
- ತಾ. 06–03–25ರಂದು ಯಾವ ಕೆಲಸವನ್ನು ನೀಡಿದರೂ ಅತ್ಯಂತ ಯಶಸ್ವಿಯಾಗಿ ನಿರ್ವಹಿಸುವ ಸಾಮರ್ಥ್ಯದ Industrialist ZL Rtn. ಮಹೇಂದ್ರ ಶೆಟ್ಟಿಯವರನ್ನು – ರೋಟರಿಯಲ್ಲಿ ಅವರು ನೀಡುತ್ತಿರುವ ಸೇವೆಗಾಗಿ ಸನ್ಮಾನಿಸಲಾಯಿತು.
- ತಾ. 20–03–25ರಂದು ನಡೆದ ಸಭೆಯಲ್ಲಿ ಮಹಿಳಾ ಸಾಧಕಿಯಾಗಿ ಮಾದರಿಯಾದ M/s. Klauz Specialities, Bangalore ಸಂಸ್ಥೆಯ ನಿರ್ದೇಶಕಿಯಾದ ಶ್ರೀಮತಿ ವೃಂದಾ ಲೂವಿಸ್‌ರವರನ್ನು ಸನ್ಮಾನಿಸಲಾಯಿತು.
- ತಾ. 22–03–25ರಂದು ಶ್ರವಣ ದೋಷವುಳ್ಳ ಮಕ್ಕಳು ಮತ್ತು ನಾಗರಿಕರಿಗೆ ಶಿಬಿರಗಳ ಮೂಲಕ ಜಾಗೃತಿ ಮೂಡಿಸುವ ಶ್ರೀ ಲವ ಬಂಗೇರ ಇವರನ್ನು ಸನ್ಮಾನಿಸಲಾಯಿತು.
- ತಾ. 30–03–25ರಂದು ನಮ್ಮ ಕ್ಲಬ್ಬಿನ ಸ್ಥಾಪಕ ಅಧ್ಯಕ್ಷರಾದ ಶ್ರೀ ಎಸ್. ಎನ್. ಪಡಿಯಾರ್‌ರವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು. Charter ಸದಸ್ಯರಾದ Rtn. ಅರುಣ್ ಕುಮಾರ್ ಶೆಟ್ಟಿ, Rtn. ಜಿ. ಸಂತೋಷ್ ಕುಮಾರ್ ಶೆಟ್ಟಿ ಮತ್ತು ಮಾಜಿ ಅಧ್ಯಕ್ಷರಾದ Rtn. ಕೆ. ಕೆ. ಕಾಂಚನ್, Rtn. ಡಾ. ಉತ್ತಮ್ ಕುಮಾರ್ ಶೆಟ್ಟಿ ಮತ್ತು Rtn. ವಿವಿಯನ್ ಕ್ರಾಸ್ತಾ ಹಾಜರಿದ್ದರು.
- ತಾ. 03–04–25ರಂದು ಪರಿಸರ ಪ್ರೇಮಿ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಾಗಾರಗಳನ್ನು ನಡೆಸುತ್ತಿರುವ ಡಾ. ರಾಜಾರಾಮ್ ಶೆಟ್ಟಿಯವರನ್ನು ಗೌರವಿಸಿ ಸನ್ಮಾನಿಸಲಾಯಿತು.
- ಏಪ್ರಿಲ್ 10ರಂದು ಪರಿಸರವನ್ನು ಸಂರಕ್ಷಿಸುವಲ್ಲಿ ಅಪಾರ ಮುತುವರ್ಜಿಯನ್ನು ವಹಿಸಿ ತನ್ನ ಸ್ವಂತ ಜಾಗದಲ್ಲಿ ಕಾಡನ್ನು ಬೆಳೆಸಿ ಹಕ್ಕಿಗಳಿಗೆ ಪೋಷಣೆ ನೀಡಿ ಎಲ್ಲರಿಗೂ ಮಾದರಿಯಾದ ಮಾಥಾಯಸ್ ಡೆಸಾರವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ಮೇ 01 ಕಾರ್ಮಿಕ ದಿನಾಚರಣೆಯ ಅಂಗವಾಗಿ ಕಾರ್ಮಿಕರಾಗಿರುವ ಯುವಕರಾದ
  1. ಅರವಿಂದ ಪೂಜಾರಿ, 2. ಮಂಜುನಾಥ್ ಆಚಾರ್ಯ, 3. ಅರುಣ್ ಕುಮಾರ್, 4. ವಿಶ್ವನಾಥ್‌ರವರನ್ನು ಇವರು ಸಮಾಜಕ್ಕೆ ನೀಡುವ ವಿವಿಧ ಸೇವೆಗಳಿಗಾಗಿ ಸನ್ಮಾನಿಸಲಾಯಿತು.
- ಮೇ 08ರಂದು – ಸಾಮಾಜಿಕ, ಸಾಹಿತ್ಯ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಸಮಾಜಕ್ಕೆ ನೀಡುತ್ತಿರುವ ವಿವಿಧ ಸೇವಗಳಿಗಾಗಿ ರೊ. ಡಾ। ಉಮೇಶ್ ಪುತ್ರನ್‌ರವರನ್ನು ಸನ್ಮಾನಿಸಲಾಯಿತು.
- ಮೇ 15ರಂದು ಡೆಹ್ರಾಡೂನ್‌ನಲ್ಲಿ ನಡೆದ ಏಷಿಯನ್ ಯುನಿವರ್ಸಿಟಿ ಇಂಟರ್‌ನ್ಯಾಶನಲ್ ಪವರ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಪಡೆದ ಕುಮಾರಿ ನಾಗಶ್ರೀ ಸೇರುಗಾರರವರನ್ನು ಕ್ಲಬ್‌ನ ಪರವಾಗಿ ಸನ್ಮಾನಿಸಲಾಯಿತು.
- ಮೇ 15ರಂದು ಯುವ ಉದ್ಯಮಿಯಾದ ಶ್ರೀ ಪ್ರತಾಪ್‌ಚಂದ್ರ ಶೆಟ್ಟಿಯವರನ್ನು ಉದ್ಯಮಿಯಾಗಿ ಯುವ ಜನರಿಗೆ ಪ್ರೇರಣೆ ನೀಡುವುದರ ಮೂಲಕ ಕಲಿಕಾ ಆಸಕ್ತಿ ಇರುವ ಯುವ ಜನರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಮತ್ತು ಉದ್ಯಮಶೀಲಾ ಕಾರ್ಯಗಾರಗಳನ್ನು ನಡೆಸಿರುವುದಕ್ಕಾಗಿ ಕ್ಲಬ್ ವತಿಯಿಂದ ಗೌರವಿಸಲಾಯಿತು.
- ದಿನಾಂಕ 14–06–2025 ರಂದು ನಮ್ಮ ಕ್ಲಬ್ ವತಿಯಿಂದ ಲಯನ್ಸ್ ಕ್ಲಬ್ ಹಂಗಳೂರಿನ ಅಧ್ಯಕ್ಷರಾದ ಲಯನ್ ರೋವನ್ ಡಿ'ಕೋಸ್ಟರವರನ್ನು ಅವರ ಅಧ್ಯಕ್ಷಾವಧಿಯಲ್ಲಿ ಮಾಡಿದ ವಿವಿಧ ಜನಪರ ಯೋಜನೆಗಳಿಗಾಗಿ ಅದರಲ್ಲೂ ಮುಖ್ಯವಾಗಿ ರೂ. 60 ಲಕ್ಷ ಮೌಲ್ಯದ ಮೇಲ್ಛಾವಣಿ ನೆಲಹಾಸು ಮತ್ತು ಗಾರ್ಡನ್ ಸುಂದರೀಕರಣವನ್ನು ಕುಂದಾಪುರದ ರೈಲ್ವೇ ನಿಲ್ದಾಣಕ್ಕೆ ನೀಡಿರುವ ಅಪೂರ್ವ ಯೋಜನೆಗಾಗಿ ಸನ್ಮಾನಿಸಲಾಯಿತು.

❖ ಜೂನ್ 19 ರಂದು ನಡೆದ ವಾರದ ಸಭೆಯ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀ ಭಾಸ್ಕರ ಕೊಗ್ಗ ಕಾಮತ್, ರಾಜ್ಯ ಪ್ರಶಸ್ತಿ ಪುರಸ್ಕೃತರು – ಅಧ್ಯಕ್ಷರು ಶ್ರೀ ದೇವಣ್ಣ ಪದ್ಮನಾಭ ಕಾಮತ್ ಮೆಮೋರಿಯಲ್ ಯಕ್ಷಗಾನ ಗೊಂಬೆಯಾಟ ಟ್ರಸ್ಟ್ – ಗೊಂಬೆಮನೆ – ಉಪ್ಪಿನಕುದ್ರು ಇವರನ್ನು ಸನ್ಮಾನಿಸಲಾಯಿತು.

❖ ತಾ. 26–06–2025ರಂದು ಜಿಲ್ಲೆಯ ಉತ್ತಮ ಮಹಿಳಾ ಉದ್ಯಮಿ ಪ್ರಶಸ್ತಿ ಪಡೆದ ತಲ್ಲೂರಿನ ಸಂಜೀವಿನಿ ಸ್ವಸಹಾಯ ಸಂಘದ ಅಧ್ಯಕ್ಷೆಯಾದ ಶ್ರೀವಿದ್ಯಾರವರನ್ನು ನಮ್ಮ ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.

## 2. Community Service :

❖ ರೋಟರಿಯಲ್ಲಿ ಜುಲೈ ತಿಂಗಳು ತಾಯಿ – ಮಗುವಿನ ಅಭ್ಯುದಯಕ್ಕಾಗಿ ಇರುವ ತಿಂಗಳು. ಈ ತಿಂಗಳಿನಲ್ಲಿ ತಲ್ಲೂರಿನ 5 ಅಂಗನವಾಡಿಗಳಿಗೆ – ತಲ್ಲೂರು, ಕೋಟೆಬಾಗಿಲು, ಪಿಂಗಾಣಿಗುಡ್ಡೆ, ರಾಜಾಡಿ ಮತ್ತು ಮಾರನಮನೆ ಈ ಶಾಲೆಯ 3 ರಿಂದ 6 ವರ್ಷದ 98 ಮಕ್ಕಳಿಗೆ ಪ್ರಾಥಮಿಕ ಕೇಂದ್ರದ ವೈದ್ಯರು, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಶಿಕ್ಷಕಿಯರೊಂದಿಗೆ ಪ್ರೋಟೀನ್ ಪೌಡರ್ ವಿತರಣಾ ಕಾರ್ಯಕ್ರಮವನ್ನು ನಡೆಸಿದೆವು. ಇದರ ಒಟ್ಟು ಮೌಲ್ಯ ರೂ. 20,000/–

❖ ತಾ. 28–07–24ರಂದು ತಲ್ಲೂರಿನ ನಾರಾಯಣ ವಿಶೇಷ ಶಾಲೆಯ ವಠಾರದಲ್ಲಿ ನಮ್ಮ RCC ಕ್ಲಬ್ಬಿನೊಂದಿಗೆ ವನಮಹೋತ್ಸವ ನಡೆಸಿ, ಸದಸ್ಯರಿಗೆ ಸಸಿಗಳನ್ನು ವಿತರಿಸಿದೆವು.

❖ ತಾ. 28–07–24ರಂದು ತಲ್ಲೂರಿನ ನಾರಾಯಣ ವಿಶೇಷ ಶಾಲೆಗೆ ರೂ. 10,000/– ದೇಣಿಗೆಯನ್ನು ಕ್ಲಬ್ಬಿನ ವತಿಯಿಂದ ನೀಡಿರುತ್ತೇವೆ.

❖ ತಾ. 29–07–2024 ಸರಕಾರಿ ಪ್ರೌಢಶಾಲೆ, ತಲ್ಲೂರು ಇಲ್ಲಿನ 240 ಮಕ್ಕಳಿಗೆ ಪ್ರಾಥಮಿಕ ಚಿಕಿತ್ಸೆಯ ಬಗ್ಗೆ ವಿಶೇಷವಾಗಿ ಹೃದಯಾಘಾತವಾದಾಗ ಅನುಸರಿಸಬೇಕಾದ CPR (Cardio Pulmonary Resuscitation) ನ್ನು ಪ್ರಾತ್ಯಕ್ಷಿಕೆ ನೀಡುವುದರ ಮುಖೇನ ಅರಿವು ಮೂಡಿಸಿದ್ದೇವೆ. ಈ ಕಾರ್ಯಕ್ರಮವನ್ನು ರೊ. ಗುರುರಾಜ್ ಕೋತ್ವಾಲ್‌ರವರು ನಡೆಸಿಕೊಟ್ಟಿರುತ್ತಾರೆ.

❖ ತಾ. 31–07–24ರಂದು ಕುಂದಾಪುರದ ಸೈಂಟ್ ಮೇರೀಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕುಂದಾಪುರ ವಲಯ ಮಟ್ಟದ ಚೆಸ್ ಸ್ಪರ್ಧೆಯ ಬಹುಮಾನದ ವೆಚ್ಚವಾಗಿ ರೂ. 8,000/– ದ ದೇಣಿಗೆಯನ್ನು ನೀಡಿರುತ್ತೇವೆ.

❖ ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಕಾಲೇಜಿನ ಮೂವರು ಬಡ ವಿದ್ಯಾರ್ಥಿಗಳ ಪದವಿ ವಿದ್ಯಾಭ್ಯಾಸಕ್ಕಾಗಿ ದಾನಿಗಳು ಕೊಡಮಾಡಿದ ರೂ. 60,000/–ವನ್ನು ಹಸ್ತಾಂತರಿಸಿ, ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಹಾರೈಸಿದ್ದೇವೆ.

❖ ನಮ್ಮ ಕ್ಲಬ್ಬಿನ ಸಹಸಂಸ್ಥೆಯಾಗಿರುವ RCC Tallur ನ ಪದಪ್ರದಾನ ಕಾರ್ಯಕ್ರಮವನ್ನು ತಾ. 28–07–2024ರಂದು ನೆರವೇರಿಸಿ, ಅಧ್ಯಕ್ಷರಾಗಿ ಯೋಗೀಶ್ ಆಚಾರ್ಯ ಮತ್ತು ಕಾರ್ಯದರ್ಶಿಯಾಗಿ ಪ್ರಭಾಕರ ಆಚಾರ್ಯ ಇವರನ್ನು ನೇಮಿಸಲಾಯಿತು. ಈ ಕಾರ್ಯಕ್ರಮದಲ್ಲಿ ರೊ. ಸತ್ಯನಾರಾಯಣ ಪುರಾಣಿಕರವರು ಮುಖ್ಯಅತಿಥಿಯಾಗಿ ಭಾಗವಹಿಸಿದ್ದರು.

❖ ತಾ. 29–07–2024ರಂದು ತಲ್ಲೂರಿನ ಪ್ರೌಢಶಾಲೆಯಲ್ಲಿ ಇಂಟರ್‍ಯಾಕ್ಟ್ ಕ್ಲಬ್ಬಿನ ಪದಗ್ರಹಣ ನೆರವೇರಿಸಿ, ಅಧ್ಯಕ್ಷ ಮತ್ತು ಕಾರ್ಯದರ್ಶಿಯನ್ನು ಆಯ್ಕೆ ಮಾಡಲಾಯಿತು.

❖ Dist. Projectಗಳಲ್ಲಿ ಒಂದಾದ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತೆಯ ಭಾಗವಾಗಿ ದಿನಾಂಕ 04–07–2024ರಂದು ನಮ್ಮ ಕ್ಲಬ್ಬಿನ ವತಿಯಿಂದ ನಮ್ಮ ಸದಸ್ಯರಾದ ರೊ. ಡಾ. ವಿಶ್ವೇಶ್ವರ್‌ರವರು ಕೊಡಮಾಡಿದ ರೂ. 5,000/–ವನ್ನು ಪಿಯುಸಿ ನೀಟ್‌ನಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನೀಡಲಾಯಿತು.

❖ 04–07–2024ರಂದು ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನಮ್ಮ ಸದಸ್ಯರಾದ ರೊ. ಮನೋಹರ ಭಟ್ ಕೊಡಮಾಡಿದ ರೂ. 5,000/–ವನ್ನು ನೀಡಲಾಯಿತು.

